ಚಿಕ್ಕಂದಿನಿಂದ ರಾಜೇಶನಿಗೆ ಹಲ್ಲಿ ಕಂಡರೆ ವಿಚಿತ್ರ ತಳಮಳ. ಅದು ಇನ್ನೇನು ಬೀಳುತ್ತದೆ ಎಂದು ಭಯ ಹುಟ್ಟಿಸುವಂತೆ ಗೋಡೆಮೇಲೆ ಓಡಾಡುತ್ತಿದ್ದದೂ ಒಂದು ಕಾರಣ. ಇಷ್ಟಲ್ಲದೆ ಅದರ ಬಿಳಿ ಪೇಲವ ಹೊಟ್ಟೆ, ತರಿತರಿ ಮುಳ್ಳು ಚರ್ಮ, ಗಂಟೆಗಟ್ಟಲೆ ಒಂದೇಕಡೆ ಸ್ಥಿರವಿದ್ದು ತಟಕ್ಕನೆ ಸರಪರ ಓಡಿಬಿಡುವುದು, ನಿ...ಧಾ...ನ...ವಾ...ಗಿ ಹರಿದಾಡುವ ಅದರ ಬಾಲ, ಏನೋ ಹೇಳಲಿಕ್ಕಿದೆ ಬಾ ಇಲ್ಲಿ ಎನ್ನುವಂತೆ ತೋರುವ ಮೂತಿ... ರಾಜೇಶ ಒಮ್ಮೆ ಬೆವರಿ ಮೈ ಕೊಡವಿಕೊಂಡ. ಮತ್ತು ತತ್‌ಕ್ಷಣ ಆ ಶೆಲ್ಫಿನಲ್ಲಿದ್ದ ಡಬ್ಬಿಗಳನ್ನೆಲ್ಲಾ ತೆಗೆದು ಬಾಗಿಲುಮುಚ್ಚಿ ಇನ್ನೊಮ್ಮೆ ಅದಕ್ಕೆ ಕೈ ಹಾಕುವುದಿಲ್ಲವೆಂದು ನಿರ್ಧರಿಸಿದ. ಆ ಡಬ್ಬಿಗಳೆಲ್ಲಾ ಕಟ್ಟೆಯ ಮೇಲೆ ಕುಳಿತು ಅಡಿಗೆಮನೆ ಇನ್ನಷ್ಟು ಚಿಕ್ಕದಾಯಿತು. ಅಂದು ರಾತ್ರಿ ಲಿವಿಂಗ್ ರೂಮಿನಲ್ಲಿ ನೆಟ್‌ಫ್ಲಿಕ್ಸ್ ಅಳವಡಿಸಿಕೊಂಡಿದ್ದ ಟಿವಿ ನೋಡುತ್ತಿದ್ದಾಗಲೇ "ಕಿಚ್ ಕಿಚ್ ಕಿಚ್ ಕಿಚ್..." ಎಂದು ಏರುದನಿಯ ಸದ್ದು ಅಡಿಗೆಮನೆಯಿಂದ ಬಂದಂತಾಗಿದ್ದು. ರಾಜೇಶನ ಕಿವಿ ನೆಟ್ಟಗಾಗಿ ತಕ್ಷಣ ಮ್ಯೂಟ್ ಮಾಡಿ ಮೌನದಲ್ಲಿ ಆಲಿಸಿದ. ನಿಖರವಾಗಿ ತಿಳಿಯಲಿಲ್ಲ. ಒಟ್ಟಿನಲ್ಲಿ ಹಲ್ಲಿಯೊಂದು ಈ ಮನೆಯಲ್ಲಿ ಝಾಂಡಾ ಹೂಡಿರುವ ಸಾಧ್ಯತೆ ಬಲವಾದಂತಾಯಿತು. ಆ ದಿನದಿಂದ ರಾಜೇಶ ಮನೆಯೊಳಗಿನ ಪ್ರತಿ ಸದ್ದು ಚಲನೆಯನ್ನು ತೀಕ್ಷ್ಣವಾಗಿ ಗಮನಿಸುವ ಪತ್ತೆದಾರನಾದ. ಕಾಣದ ಸಂಗತಿಗಳೇ ಅಲ್ಲವೆ ಮನುಷ್ಯನಲ್ಲಿ ಹೆಚ್ಚಿನ ಭಯ ಹುಟ್ಟಿಸೋದು! ಆದರೆ, ಈ ಪತ್ತೆದಾರಿಕೆಯ ಅಗತ್ಯ ಹೆಚ್ಚು ದಿನ ಬೀಳಲಿಲ್ಲ. ಮಾರನೆಯ ಬೆಳಗ್ಗೆ ನಿದ್ದೆಗಣ್ಣಲ್ಲಿ ರೂಮಿಂದ ಆಚೆಬಂದು ಅಡಿಗೆಮನೆಯ ಲೈಟ್ ಹಾಕುತ್ತಿದ್ದಂತೆ ಮೂಲೆಯಲ್ಲಿ ನೆಲದಮೇಲೆ ಹಲ್ಲಿಯೊಂದು ಸರ್ರನೆ ಅಲ್ಲೇ ಸಂದಿಯೊಳಗೆ ನುಸುಳಿಬಿಟ್ಟಿತು. ರಾಜೇಶನ ಮೈ ತಣ್ಣಗಾಗಿಹೋಯಿತು. ಆವತ್ತು ರಾತ್ರಿಯೇ ಅವನು ರೂಮಿನಿಂದ, "ದರಿದ್ರ ಹಲ್ಲೀ..." ಎಂದು ಕೂಗಿ ನಂತರ ಮಲಗಿದ್ದು.

ಮರುದಿನದಿಂದಲೇ ರಾಜೇಶ ಹಲವು ಬದಲಾವಣೆಗಳನ್ನು ಮಾಡಿಕೊಂಡ. ಲಿವಿಂಗ್ ರೂಮಿನಲ್ಲಿ ಟಿವಿ ನೋಡುತ್ತಾ ಊಟ ತಿಂಡಿ ಮಾಡುತ್ತಿದ್ದವನು ಈಗ ಬೆಡ್‌ರೂಮಿನಲ್ಲಿ ಬಾಗಿಲು ಹಾಕಿಕೊಂಡು ಲ್ಯಾಪ್‌ಟಾಪ್‌ನಲ್ಲಿ ನೆಟ್‌ಫ್ಲಿಕ್ಸ್ ನೋಡುತ್ತಾ ಊಟ ಮಾಡಲಾರಂಭಿಸಿದ. ಹಿಂದುಮುಂದು ನೋಡುತ್ತಲೇ ಆದಷ್ಟೂ ತ್ವರಿತವಾಗಿ ಏನೋ ಒಂದು ಅಡಿಗೆ ಮಾಡಿ ಕುಕ್ಕರಿನಲ್ಲಿಟ್ಟು ಮತ್ತೆ ರೂಮು ಸೇರಿಕೊಂಡುಬಿಡುತ್ತಿದ್ದ. ಆ ದಿನ ಲೈಟ್ ಹಾಕಿದಾಕ್ಷಣ ಮನುಷ್ಯ ಬಂದನೆಂದು ಹಲ್ಲಿ ಓಡಿಹೋಗಿದ್ದರಿಂದ ಬಹುಶಃ ಹಲ್ಲಿಗೆ ಇದೇ ಸೂಚನೆಯಿರಬೇಕೆಂದು ತಿಳಿದು ದಿನವಿಡೀ ಬೆಳಕಿದ್ದರೂ ಅಡಿಗೆಮನೆ ಲೈಟ್ ಉರಿಸುತ್ತಿದ್ದ. ಅಡಿಗೆಮನೆಗೆ ನೇರವಾಗಿ ಕಿಟಕಿಯೇ ಇರದೆ ಕೇವಲ ಲಿವಿಂಗ್ ರೂಮಿನ ಬಾಲ್ಕನಿಯ ವಿಸ್ತರಣೆಯಷ್ಟೇ ಇತ್ತು. ಹೀಗಾಗಿ ಈ ಹಲ್ಲಿ ಮತ್ತೆ ಕಂಡರೂ ಅದನ್ನು ಓಡಿಸುವುದು ಹೇಗೆಂದು ಚಿಂತಿತನಾದ. ಇಷ್ಟಕ್ಕೂ ಅದು ಏನನ್ನು ತಿಂದು ಹೀಗೆ ಅಪರಿಚಿತರ ಮನೆಯಲ್ಲಿ ಬದುಕಿರುತ್ತದೆ ಮತ್ತು ಓಡಿಸುವುದು ಹೇಗೆಂದು ತಿಳಿಯಲು ಗೂಗಲ್ ಮೊರೆ ಹೋದನಾದರೂ, ಎಲ್ಲಾ ಪರಿಹಾರಗಳಲ್ಲೂ ಹಲ್ಲಿಯ ಚಿತ್ರ ವಿಡಿಯೊ ಇತ್ಯಾದಿ ತೋರುವುದರಿಂದ ತಡೆಯಲಾಗದೆ ಆ ಪ್ರಯತ್ನ ಬಿಟ್ಟ. ಮತ್ತು ಅದನ್ನು ಎಲ್ಲೆಂದರಲ್ಲಿ ಹಿಂಬಾಲಿಸಿ ತನಗೆ ಬೇಕಾದ ದಿಕ್ಕಿನಲ್ಲಿ ಚಲಿಸುವಂತೆ ಮಾಡಬೇಕಾದಲ್ಲಿ, ಅಷ್ಟು ಹೊತ್ತೂ ಅದನ್ನು ನೋಡುತ್ತಿರಬೇಕು! ರಾಜೇಶನಿಗೋ ಅದರ ಚಲನೆ ನೋಡುವುದಿರಲಿ, ನೆನಸಿಕೊಂಡರೂ ಮೈ ಝುಮ್ಮೆನ್ನುತ್ತಿತ್ತು. ಹಲ್ಲಿ ಇನ್ನೂ ಬೆಡ್‌ರೂಮು ಪ್ರವೇಶಿಸಿಲ್ಲ ಎಂಬುದೊಂದೇ ಅವನಿಗೆ ಸಮಾಧಾನವಾಗಿತ್ತು. ಅದನ್ನು ಖಾತರಿಪಡಿಸಿಕೊಳ್ಳಲು ರೂಮಿನಲ್ಲಿ ಮಂಚದ ಹಿಂದೆ, ಕೆಳಗೆ, ವಾರ್ಡ್‌ರೋಬ್ ಸುತ್ತ ಪದೇಪದೇ ಪರೀಕ್ಷಿಸುತ್ತಿದ್ದ.

ಈ ಮಧ್ಯೆ ಕೊರೊನಾ ಸೋಂಕು ಮತ್ತದರ ಸುದ್ದಿಸಂಖ್ಯೆಗಳು ವ್ಯಾಪಕವಾಗಿ ಹಬ್ಬತೊಡಗಿದವು. ಬಿಲ್ಡಿಂಗ್ ನಂಬರ್ 91 ಮತ್ತು 92ರಲ್ಲಿ ಸುಮಾರು ಸೋಂಕಿನ ಕೇಸುಗಳಾಗಿದ್ದು, ರಾಜೇಶ ಸಂಜೆ ವಾಕ್ ಹೋಗಲೂ ಹಿಂಜರಿದ. ಬ್ಯಾಂಕಿಗೆ ಹೋಗದ ದಿನಗಳಲ್ಲಿ ಅಡಿಗೆಮನೆಯಲ್ಲಿ ಒಂದು